ಕುವೆಂಪು ಅವರೊಂದಿಗೆ ನಿಕಟ ಒಡನಾಟ ಹೊಂದಿದ್ದ ಕಡಿದಾಳ್ ಪ್ರಕಾಶ್, 'ಕುವೆಂಪು ಪ್ರತಿಷ್ಠಾನ'ದ ಸಮಕಾರ್ಯದರ್ಶಿ. ತೀರ್ಥಹಳ್ಳಿ ತಾಲ್ಲೂಕಿನ ಕಡಿದಾಳ್ ಗ್ರಾಮದವರು. ಸಾಂಸ್ಕೃತಿಕ ಚಟುವಟಿಕೆಗಳೊಂದಿಗೆ ಕ್ರೀಡಾಕೂಟಗಳ ಸಂಘಟನೆಯಲ್ಲೂ ಅನುಭವಿ. 'ಕಟ್ಟುವ ಹಾದಿಯಲ್ಲಿ... ಕುವೆಂಪು ಪ್ರತಿಷ್ಠಾನ: ಉಗಮ–ವಿಕಾಸ' ಹಾಗೂ 'ನಾ ಕಂಡಂತೆ ತೇಜಸ್ವಿ–ಶಾಮಣ್ಣ' ಕಡಿದಾಳ್ ಪ್ರಕಾಶ್ ಅವರ ಪ್ರಮುಖ ಕೃತಿಗಳು.

ಹೊಂದಾಣಿಕೆ ಸ್ವಭಾವದವರು. ನಾನು ಈ ಲೇಖನ ಬರೆಯುವಾಗ, ನನ್ನ ಮಡದಿ ಕಲ್ಪನಾ, 'ಕಡಿದಾಳಿಗೆ ಬಂದಾಗ ನಮ್ಮ ಜಗಲಿಯಲ್ಲಿ ಇರುವ ಬೆಂಚ್ ಮೇಲೆ ದಂಪತಿ ಒಟ್ಟಿಗೆ ಕೂತು, ನಮ್ಮ ಆರು ತಿಂಗಳ ಮೊಮ್ಮಗಳನ್ನು ತೊಡೆಯಮೇಲೆ ಕೂರಿಸಿಕೊಂಡು, ಮಗು ಗೊಂಬೆ ಇದ್ದ ಹಾಗೆ ಇದೆ ಎಂದು ಹೇಳಿ, ತುಂಬಾ ಹೊತ್ತು ಕೂರಿಸಿಕೊಂಡಿದ್ದರು' ಎಂದು ನೆನಪಿಸಿಕೊಂಡಳು. ಮಹಾರಾಣಿ ಕಾಲೇಜಿನಲ್ಲಿ ಅವರ ವಿದ್ಯಾರ್ಥಿ ಆಗಿದ್ದ ನನ್ನ ಅತ್ತಿಗೆ ಶೋಭಕ್ಕನನ್ನು, ಅವರಿಗೆ ಆತ್ಮೀಯರಾಗಿದ್ದ ನನ್ನಣ್ಣ ಕಡಿದಾಳ್ ಶಾಮಣ್ಣನನ್ನು ನೆನಪಿಸಿಕೊಂಡು ತುಂಬಾ ಹೊತ್ತು ಮಾತನಾಡಿದ್ದರು.

ಪ್ರತಿಷ್ಠಾನದ ಸಭೆಗಳಿಗೆ ತಪ್ಪದೇ ಭಾಗವಹಿಸಿದವರು ಕಮಲಮ್ಮ. ಕಳೆದ ಜೂನ್ 18ರ ಸಭೆಗೆ ಹಿಂದಿನ ದಿನ ಫೋನ್ ಮಾಡಿ, 'ನಾಳೆ ಸಭೆಗೆ ಬರುತ್ತೇನೆ. ವೀಲ್ ಚೇರ್ ಇದ್ದರೆ ಸಹಾಯವಾಗುತ್ತದೆ. ಸಿಗಬಹುದಾ?' ಎಂದು ಕೇಳಿದ್ದರು. ನಾವು ಕನ್ನಡ ಭವನದ ಅಧಿಕಾರಿಗಳನ್ನು ಸಂಪರ್ಕಿಸಿ ವೀಲ್ ಚೇರ್ ವ್ಯವಸ್ಥೆ ಮಾಡಿದ್ದೆವು. ಕನ್ನಡ ಭವನದ ಬಾಗಿಲಲ್ಲಿ ಚೇರ್ ಇಟ್ಟು ಕಾದಾಗ, ಹಂಪನಾ ಬಂದವರು, 'ಕಮಲಾ ಸ್ವಲ್ಪ ಸುಸ್ತಾಗಿದ್ದಾರೆ, ಬರಲು ಸಾಧ್ಯವಾಗಲಿಲ್ಲ' ಎಂದರು. ಮೇಡಂ ಅನುಪಸ್ಥಿತಿ ನಮಗೆಲ್ಲಾ ಬೇಸರ ತಂದಿತ್ತು. ನನಗೆ ಪರಿಚಯ ಆದ ದಿನದಿಂದಲೂ, ಹೃದಯ ಸಂಬಂಧಿ ಮತ್ತು ಸಕ್ಕರೆ ಕಾಯಿಲೆ ಇದ್ದರೂ ಶಿಸ್ತುಬದ್ಧವಾಗಿ ಸಮಯಕ್ಕೆ ಸರಿಯಾಗಿ ಇನ್ಸುಲಿನ್ ತೆಗೆದುಕೊಂಡು ಆರೋಗ್ಯ ಕಾಪಾಡಿಕೊಂಡಿದ್ದರು. 'ಹೃದಯದ ಶಸ್ತ್ರಚಿಕಿತ್ಸೆ ಆಗಿ ಡಾಕ್ಟರ್‌ಗಳು ಕೊಟ್ಟ ಸಮಯದ ಎರಡು ಪಟ್ಟು ಸಮಯ ಹೃದಯ ಕೆಲಸ ಮಾಡಿದೆ' ಎಂದು ಕಮಲಾ ಅವರ ಹೃದಯಕ್ಕೆ ಮೆಚ್ಚುಗೆಯ ಮಾತುಗಳನ್ನು ಹಂಪನಾ ಹೇಳುತ್ತಿದ್ದರು. ಇತ್ತೀಚೆಗೆ ಒಂದು ಸಾರಿ ಹಂಪನಾ ಹೇಳಿದ್ದರು: 'ಜಿ.ಎಸ್. ಶಿವರುದ್ರಪ್ಪನವರಿಗೂ ಕಮಲಾ ಅವರಿಗೂ 26 ವರ್ಷಗಳ ಹಿಂದೆ ಡಾ. ಜವಳಿಯವರು ಒಂದೇ ದಿನ ಆಪರೇಷನ್ ಮಾಡಿದ್ದರು.' ನಾನು ಆಗಲೂ ತಮಾಷೆ ಮಾಡಿದ್ದೆ: 'ನೋಡಿ, ಮೇಡಂ ಹೃದಯ ಹತ್ತು ವರ್ಷ ಜಾಸ್ತಿ ಸರ್ವೀಸ್ ಕೊಡ್ತು.'

ಕಮಲಾ ಅವರ ಶಿಸ್ತುಬದ್ಧ ಜೀವನವೇ ಅವರ ದೀರ್ಘಾಯಸ್ಸಿಗೆ ಕಾರಣ. ಕುಟುಂಬ ಸಹಾ ಅಷ್ಟೇ ಎಚ್ಚರಿಕೆಯಿಂದ ಅವರನ್ನು ನೋಡಿಕೊಂಡಿರುವುದನ್ನು ನಾನು ಹತ್ತಿರದಿಂದ ನೋಡಿದವನು. ಇತ್ತೀಚಿನ ವರ್ಷಗಳಲ್ಲಿ ಹಲವು ಸಾರಿ ಹೃದಯ ಸಂಬಂಧಿ ಆಸ್ಪತ್ರೆಗಳಿಗೆ ಒಂದೆರಡು ದಿನದ ಮಟ್ಟಿಗೆ ಚಿಕಿತ್ಸೆಗೆ ಸೇರಿಸುತ್ತಿದ್ದರು. ನಾನೇನಾದರೂ ಆ ಸಮಯದಲ್ಲಿ ಹಂಪನಾ ಅವರಿಗೆ ಫೋನ್ ಮಾಡಿದರೆ ಅವರ ಧ್ವನಿಯಲ್ಲಿನ ಆತಂಕ ಗೊತ್ತಾಗುತ್ತಿತ್ತು. ನಾನು ತಕ್ಷಣ 'ಮತ್ತೆ ಫೋನ್ ಮಾಡುತ್ತೇನೆ, ಅರ್ಜೆಂಟ್ ಇಲ್ಲ' ಎಂದು ಫೋನ್ ಇಡುತ್ತಿದ್ದೆ. ಆದರೆ ಅವರು ಅರ್ಧಗಂಟೆಯಲ್ಲೇ ಮತ್ತೆ ಫೋನ್ ಮಾಡಿ, ಎಲ್ಲ ವಿಚಾರ ತಿಳಿಸುತ್ತಿದ್ದರು.

ಕುಪ್ಪಳಿಯಲ್ಲಿ ಕುವೆಂಪು ಪ್ರತಿಷ್ಠಾನದ ಮೂಲಕ ಆಗಿರುವ ಕೆಲಸಗಳಿಗೆ ಮುಖ್ಯ ಕಾರಣ, ಸ್ಥಾಪಕ ಸದಸ್ಯರಾಗಿ ಕಮಲಮ್ಮ ನೀಡಿದ ಬೆಂಬಲ ಮತ್ತು ಪ್ರೋತ್ಸಾಹ. 'ಬೆಂಗಳೂರಿನಲ್ಲಿ ನಾನಿರುವಾಗಲೇ ಕುವೆಂಪು ಭವನ ಕಟ್ಟಿಬಿಡಿ ಪ್ರಕಾಶ್. ಕಣ್ತುಂಬಾ ನೋಡಿ ಹೋಗುತ್ತೇನೆ' ಎನ್ನುತ್ತಿದ್ದರು. ಯೋಜನೆ ಹೇಗೆ ರೂಪುಗೊಳ್ಳುತ್ತಿದೆ ಎಂದು ಆಗಾಗ ವಿಚಾರಿಸಿಕೊಳ್ಳುತ್ತಿದ್ದರು.

ಕಮಲಾ ಅವರ ಅಗಲಿಕೆ ನಮಗೆ ನೋವನ್ನು ತಂದಿರುವುದು ಸ್ವಾಭಾವಿಕವೆ. ಅರವತ್ತಮೂರು ವರ್ಷಗಳ ಹೊಂದಾಣಿಕೆಯ ಜೋಡೆತ್ತು ಈಗ ಒಂಟಿ ಎತ್ತಾಗಿರುವುದು ಮತ್ತಷ್ಟು ಬೇಸರದ ಸಂಗತಿ.

●